


# ಬುಕ್ಮಾರ್ಕ್

ಈ ಟ್ಯುಟೋರಿಯಲ್ ನಲ್ಲಿ ನೀವು ಒಂದು ಸುಂದರವಾದ ಬುಕ್ಮಾರ್ಕ್ ಮಾಡುವುದು ಹೇಗೆ ಎಂದು ಕಲಿಯುತ್ತೀರಿ




ಎಲ್ಲಾ ಪುಸ್ತಕ ಪ್ರೇಮಿಗಳಿಗೆ ಮತ್ತು ಪುಸ್ತಕ ಪ್ರೇಮಿಗಳ ಸ್ನೇಹಿತರಿಗೆ ಮತ್ತು ಸೃಜನಶೀಲ ಉತ್ಸಾಹಿಗಳಿಗೆ, ಈ ಪ್ರಾಜೆಕ್ಟ್ ಕೆಲವು ಅದ್ಭುತವಾದ ಉಡುಗೊರೆಗಳನ್ನು ಗಳಿಸಲು ಸಹಾಯ ಮಾಡುತ್ತದೆ. ಇದು ಸುಲಭ ಮತ್ತು ಸಂತಸ ತರುವಂಥದ್ದು. ಈ ಟ್ಯುಟೋರಿಯಲ್ ನಲ್ಲಿ ನೀವು ಒಂದು ಸುಂದರವಾದ ಬುಕ್ಮಾರ್ಕ್ ಮಾಡುವುದು ಹೇಗೆ ಎಂದು ಕಲಿಯುತ್ತೀರಿ. ನೀವು ಹೊಲಿಯಲು ಇಷ್ಟಪಡುವಷ್ಟು ಓದುವುದನ್ನೂ ಪ್ರೀತಿಸುವವರಲ್ಲಿ ಒಬ್ಬರಾಗಿದ್ದರೆ, ಅದು ಇನ್ನೂ ಉತ್ತಮ...

ಈ ಬುಕ್ಮಾರ್ಕ್ ತಯಾರಿಸಲು ನಿಮಗೆ ಏನು ಬೇಕೆಂದರೆ -8 x 1.5 ಇಂಚಿನ ತುಂಡು ಬಟ್ಟೆ, ನಿಮ್ಮ ಆಯ್ಕೆಯ ಸಣ್ಣ ವರ್ಣಮಯ ಪ್ಯಾಚ್, ಕೆಲವು ಪಿನ್ ಗಳು, ದಾರ, ಮಾರ್ಕರ್, ಅಳತೆ ಪಟ್ಟಿ ಮತ್ತು ಕತ್ತರಿ (ಪಿಂಕಿಂಗ್ ಶಿಯರ್ಸ್).

ನಿಮ್ಮ ಪಿಂಕಿಂಗ್ ಕತ್ತರಿಗಳೊಂದಿಗೆ ಬಟ್ಟೆಯ ಅಂಚುಗಳನ್ನು ಟ್ರಿಮ್ ಮಾಡಿ, ಈ ರೀತಿಯಲ್ಲಿ ಝಿಗ್ ಝಾಗ್ ಅಂಚನ್ನು ಪಡೆದುಕೊಳ್ಳಿ, ಇದು ಉತ್ತಮವಾದ ವಿನ್ಯಾಸವೊಂದನ್ನು ಸೇರಿಸುತ್ತದೆ ಮತ್ತು ಬಟ್ಟೆ ಹರಿದು ಬಿಟ್ಟುಕೊಳ್ಳುವುದನ್ನು ತಡೆಯುತ್ತದೆ.

ಬಟ್ಟೆಯ ಮಧ್ಯಭಾಗದಲ್ಲಿ ಒಂದು ರೇಖೆಯನ್ನು ಬರೆಯಿರಿ. ಹೂವಿನ ಪ್ಯಾಚ್ ಅನ್ನು ಬಟ್ಟೆಯ ಮೇಲೆ ಇರಿಸಿ ಮತ್ತು ಅದನ್ನು ಭದ್ರಗೊಳಿಸಲು ಪಿನ್ ಮಾಡಿ. ಹೊಲಿಗೆ ಮಾಡುವ ಸಮಯ

ನಿಮ್ಮ ಮಶೀನನ್ನು ಹೊಂದಿಸಿಕೊಳ್ಳಿ - ಪ್ಯಾಟರ್ನ್ ಸೆಲೆಕ್ಟರ್ ಅನ್ನು C ಗೆ ತಿರುಗಿಸಿ ಮತ್ತು ಸ್ಟಿಚ್ ಲೆಂಥ್ ಸೆಲೆಕ್ಟರ್ ಅನ್ನು SS ಮೋಡ್ ಗೆ ತಿರುಗಿಸಿ.



ನೀವು ಪ್ಯಾಚ್ ಅನ್ನು ತಲುಪುವ ತನಕ, ಗುರುತು ಮಾಡಿದ ಸಾಲಿನಲ್ಲೇ ಹೊಲಿಯಿರಿ. ವಿಭಿನ್ನ ಬಣ್ಣದ ದಾರಗಳನ್ನು ಬಳಸಿ ಇದರಿಂದ ವಿನ್ಯಾಸವು ಎದ್ದುಕಾಣುತ್ತದೆ.

ಸ್ಟಿಚ್ ಪ್ಯಟರ್ನ್ ಅನ್ನು ಬದಲಾಯಿಸಲು ಸೂಜಿಯನ್ನು ಮೇಲಕ್ಕೆತ್ತಿ - ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್ ಅನ್ನು A ಗೆ ತಿರುಗಿಸಿ, ಮತ್ತು ಸ್ಟಿಚ್ ಲೆಂಥ್ ಸೆಲೆಕ್ಟರ್ ಅನ್ನು SS ಮೋಡ್ ನಲ್ಲಿಯೇ ಇರಿಸಿ.

ನೀವು ಎಲ್ಲಿ ನಿಲ್ಲಿಸಿದ್ದಿರೋ ಅಲ್ಲಿಂದಲೇ ಹೊಲಿಗೆಯನ್ನು ಮುಂದುವರಿಸಿ.
ಪಿನ್ ಅನ್ನು ತೆಗೆಯಿರಿ ಮತ್ತು ಪ್ಯಾಚ್ ನ ಮಧ್ಯಭಾಗದ ತನಕ ಹೊಲಿಯಿರಿ.



ಸೂಜಿಯನ್ನು ಎತ್ತಿ ಮತ್ತು ಎರಡೂ ತುದಿಗಳಲ್ಲಿ ಹೆಚ್ಚುವರಿ ದಾರವನ್ನು ಕತ್ತರಿಸಿ.
ಆಹಾ! ನಿಮ್ಮ ಬುಕ್ಮಾರ್ಕ್ ಸಿದ್ಧವಾಗಿದೆ.

ನಾವು ಈ ಬುಕ್ಮಾರ್ಕ್ಗಾಗಿ ಹೂವಿನ ಪ್ಯಾಚ್ ಅನ್ನು ಆಯ್ಕೆ ಮಾಡಿದ್ದೇವೆ, ಆದರೆ ನಿಮಗೆ ಬೇಕಾದ ಪ್ಯಾಚ್ ಅನ್ನು ಆಯ್ಕೆ ಮಾಡಿಕೊಳ್ಳಿ ಅಥವಾ ಅದನ್ನು ರಚಿಸಿಕೊಳ್ಳಿ - ಉದಾಹರಣೆಗೆ ಒಂದರ ಮೇಲೊಂದು ಇರಿಸಿದ, ಒಂದು ದೊಡ್ಡ ಮತ್ತು ಒಂದು ಸಣ್ಣ ಚೌಕ. ಅಥವಾ ಒಂದು ಕಾದಂಬರಿಯ ಪ್ರಾತಿನಿಧ್ಯವಾಗಬಹುದು, ಅಥವಾ ನಿಮ್ಮ ತತ್ತ್ವಗಳಿಗನುಗುಣವಾದ ಅರ್ಥಪೂರ್ಣವಾದ ಪ್ಯಾಚ್ ಆಗಿರಬಹುದು ... ಯಾವುದಾದರೂ ಸರಿಯೇ!